

بسم اللهِ الرّحمٰن الرّحيم

# ಬದ್ರ್ ಯುದ್ಧ – ಯುದ್ಧ ಪೂರ್ವ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **23–06–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಕಳೆದ ಖುತ್ಬದಲ್ಲಿ ಪ್ರಸ್ತಾಪಿಸಲಾದಂತೆ ವ್ಯಾಪಾರ ಸಂಘವನ್ನು ರಕ್ಷಿಸಲಿಕ್ಕಾಗಿ ಮಕ್ಕದಿಂದ ಖುರೈಶಿನ ಸೈನ್ಯ ಆಗಮಿಸುತ್ತಿರುವುದರ ಮಾಹಿತಿಯನ್ನು ಹಝ್ರತ್ ಪೈಗಂಬರ್(ಸ) ಕಳುಹಿಸಿದ ದೂತರು ನೀಡಿದರು. ಆಗ ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಸ್ಥಿತಿಗತಿಗಳ ಬಗ್ಗೆ ತಿಳಿಸಿ ಸಲಹೆ ಕೇಳಿದರು.

ಆಗ ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ) ನಂತರ ಹಝ್ರತ್ ಮಿಖ್‌ದಾದ್ ಬಿನ್ ಅಮ್ರ್(ರ) ಹೀಗೆ ಹೇಳಿದರು: ನೀವು ಮತ್ತು ನಿಮ್ಮ ದೇವನು ಇಬ್ಬರೂ ಹೋರಾಡಿರಿ, ನಾವು ಇಲ್ಲಿ ಕುಳಿತುಕೊಳ್ಳುತ್ತೇವೆ ಎಂದು ಬನೀ ಇಸ್ರಾಈಲರು ಹಝ್ರತ್ ಮೂಸಾ(ಅ)ರಿಗೆ ಕೊಟ್ಟ ಉತ್ತರವನ್ನು ನಾವು ನೀಡಲಾರೆವು. ಬದಲಾಗಿ ನೀವು ಮಾಡುವ ತೀರ್ಮಾನದೊಂದಿಗೆ ನಾವಿದ್ದೇವೆ ಮತ್ತು ನಾವು ನಿಮ್ಮೊಂದಿಗೆ ಸೇರಿಕೊಂಡು ಶತ್ರುಗಳ ವಿರುದ್ಧ ಯುದ್ಧ ಮಾಡುವೆವು. ನಿಮ್ಮನ್ನು ಸತ್ಯದಿಂದ ಕಳುಹಿಸಿದ ಆ ಅಲ್ಲಾಹನ ಆಣೆ ಹಾಕಿ ಹೇಳುತ್ತೇವೆ, ನೀವು ನಮ್ಮನ್ನು **ಬರ್ಕುಲ್ ಗ಼ಮಾದ್** ತನಕ ಕೊಂಡು ಹೋದರೂ ನಾವು ನಿಮ್ಮ ಜೊತೆಗೆ ಬರುವೆವು. ಇದನ್ನು ಆಲಿಸಿಕೊಂಡು ಹಝ್ರತ್ ಪೈಗಂಬರ್(ಸ) ಅವರನ್ನು ಅಭಿನಂದಿಸಿ ಅವರಿಗಾಗಿ ದುಆ ಮಾಡಿದರು.

ಬರ್ಕುಲ್ ಗ಼ಮಾದ್ ಎಂಬುದು ಮಕ್ಕದ ದಕ್ಷಿಣ ದಿಕ್ಕಿನಲ್ಲಿ ಸುಮಾರು 430 ಕಿ.ಮೀ. ದೂರದಲ್ಲಿ ಹೆದ್ದಾರಿಯಿಂದ ಬೇರ್ಪಟ್ಟ ದಾರಿಯ ಸ್ವಲ್ಪ ದೂರದ ಒಂದು ಪ್ರದೇಶವಾಗಿದೆ. ಅದನ್ನು ದೂರ ಮತ್ತು ಕಷ್ಟಕರವಾದ ಯಾತ್ರೆಗೆ ಸಂಬಂಧಿಸಿ ವಾಡಿಕೆಯಾಗಿ ಬಳಸಲಾಗುತ್ತದೆ. ಎಂದರೆ, ನೀವು ಎಷ್ಟು ದೂರಕ್ಕೆ ಕೂಡ ಹೋದರೂ ನಾವು ನಿಮ್ಮ ಜೊತೆಗೆ ಇರುವೆವು ಎಂದಾಗಿದೆ ಅದರ ಅರ್ಥ.

ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ), ಹಝ್ರತ್ ಮಿಖ್‌ದಾದ್(ರ) ಈ ಮೂವರೂ ಮುಹಾಜಿರ್‌ಗಳಾಗಿದ್ದರು. ಆದ್ದರಿಂದ ಅನ್ಸಾರರ ಅಭಿಪ್ರಾಯವನ್ನು ತಿಳಿದುಕೊಳ್ಳಲು ಹಝ್ರತ್ ಪೈಗಂಬರ್(ಸ) ಬಯಸಿದರು.

ಹಝ್ರತ್ ಸಅದ್ ಬಿನ್ ಮುಆಧ್(ರ) ಹೇಳಿದರು: ಯಾ ರಸೂಲಲ್ಲಾಹ್, ನಾವು ನಿಮ್ಮ ಮೇಲೆ ವಿಶ್ವಾಸವನ್ನು ಇರಿಸಿದ್ದೇವೆ. ನೀವು ತಂದ ಧರ್ಮ ಸತ್ಯವಾಗಿದೆ ಎಂಬುದಕ್ಕೆ ನಾವು ಸಾಕ್ಷಿಗಳಾಗಿದ್ದೇವೆ. ನಿಮ್ಮ ಆದೇಶಗಳನ್ನು ಆಲಿಸಿಕೊಂಡು ಅವುಗಳನ್ನು ಪಾಲಿಸುವುದಾಗಿ ನಾವು ಪ್ರತಿಜ್ಞೆ ಮಾಡಿದ್ದೇವೆ. ಆದ್ದರಿಂದ ನೀವು ಕರೆದುಕೊಂಡು ಹೋಗುವಲ್ಲಿಗೆ ನಾವು ಬರಲು ಸಿದ್ಧರಾಗಿದ್ದೇವೆ. ಆದ್ದರಿಂದ ಅಲ್ಲಾಹನ ಅನುಗ್ರಹದೊಂದಿಗೆ ನಮ್ಮ ಜೊತೆಗೆ ಹೊರಡಿರಿ. ಹಝ್ರತ್ ಸಅದ್(ರ)ರ ಈ ಮಾತನ್ನು ಕೇಳಿ ಹಝ್ರತ್ ಪೈಗಂಬರ್(ಸ) ಬಹಳಷ್ಟು ಸಂತೋಷಗೊಂಡರು ಮತ್ತು ಹೀಗೆ ಹೇಳಿದರು: ಎರಡು ಸಂಘಗಳಲ್ಲಿ (ಸಿರಿಯದ ವ್ಯಾಪಾರಿ ತಂಡ ಅಥವಾ ಖುರೈಶಿಯರ ಸೈನ್ಯ) ಈ ಎರಡರಲ್ಲಿ ಒಂದು ಸಂಘದ ಮೇಲೆ ಜಯ ಗಳಿಸುವುದಾಗಿ ಅಲ್ಲಾಹನು ನನಗೆ ವಾಗ್ದಾನ ಮಾಡಿರುವನು. ಶತ್ರು ಜನರು ಕೊಲ್ಲಲ್ಪಟ್ಟು ಬೀಳುವ ಜಾಗವನ್ನು ನಾನು ನೋಡುತ್ತಿದ್ದೇನೆ.

ಸಹಾಬಿಯರು ಕೇಳಿದರು: ಯಾ ರಸೂಲಲ್ಲಾಹ್, ಖುರೈಶಿ ಸೈನ್ಯ ಆಗಮಿಸುತ್ತಿರುವುದರ ಬಗ್ಗೆ ನಿಮಗೆ ಮೊದಲೇ ತಿಳಿದಿದ್ದರೆ, ನೀವು ಮದೀನದಲ್ಲೇ ಯುದ್ಧದ ಸಾಧ್ಯತೆ ಬಗ್ಗೆ ನಮ್ಮೊಡನೆ ಏಕೆ ಹೇಳಲಿಲ್ಲ. ಹಾಗಿದ್ದರೆ ನಾವು ಅದರ ಸ್ವಲ್ಪ ತಯಾರಿಯನ್ನು ಮಾಡಿ ಹೊರಡುತ್ತಿದ್ದೆವು.

ಈ ಮಾಹಿತಿ ಮತ್ತು ಸಮಾಲೋಚನೆ ಇದ್ದೂ ಹಾಗೂ ಎರಡು ಸಂಘಗಳಲ್ಲಿ ಒಂದರ ಮೇಲೆ ಮುಸ್ಲಿಮರು ಖಂಡಿತ ವಿಜಯ ಸಾಧಿಸುವರು ಎಂದು ಹಝ್ರತ್ ಪೈಗಂಬರ್(ಸ)ರಿಗೆ ಅಲ್ಲಾಹನ ಕಡೆಯಿಂದ ದೈವಿಕ ಸುವಾರ್ತೆ ಇದ್ದೂ ಆ ಎರಡು ಸಂಘಗಳಲ್ಲಿ ಯಾವ ಸಂಘದೊಂದಿಗೆ ಮುಸ್ಲಿಮರ ಮುಖಾಮುಖಿಯಾಗುವುದು ಎಂಬುದರ ಬಗ್ಗೆ ನಿಖರವಾಗಿ ಗೊತ್ತಿರಲಿಲ್ಲ. ಸಹಜವಾಗಿಯೇ ಅವರು ದುರ್ಬಲವಾದ ಸಂಘದೊಂದಿಗೆ ಹೋರಾಟ ನಡೆಸಲು ಹೆಚ್ಚು ಬಯಸುತ್ತಿದ್ದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಬದ್ರ್ ಯುದ್ಧದ ವೇಳೆ ಹಝ್ರತ್ ಪೈಗಂಬರ್(ಸ) ಅನ್ಸಾರರರಿಂದ ಸಲಹೆ ಪಡೆಯಲು ಬಯಸುತ್ತಿದ್ದರು. ಅನ್ಸಾರರ ಮನಸ್ಸಿನಲ್ಲಿ ಇದ್ದ ಸಂಗತಿಯೇನೆಂದರೆ, ನಮ್ಮೆದುರು ಯುದ್ಧ ಮಾಡುವವರು ಮಕ್ಕಾದವರು. ನಾವು ಯುದ್ಧದ ಸಲಹೆಯನ್ನು ನೀಡಿದರೆ, ನಮ್ಮ ಸಹೋದರರ ಮತ್ತು ಸಂಬಂಧಿಕರ ವಿರುದ್ಧ ಯುದ್ಧ ಮಾಡಲು ಅನ್ಸಾರರು ಹೇಳುತ್ತಿದ್ದಾರೆ ಎಂದು ಮುಹಾಜಿರರು ಭಾವಿಸುವರು ಎಂಬ ಚಿಂತೆ ಅನ್ಸಾರರ ಮನಸ್ಸಿನಲ್ಲಿತ್ತು. ಆದರೆ ಹಝ್ರತ್ ಪೈಗಂಬರ್(ಸ) ಪದೇ ಪದೇ ಕೇಳಿದಾಗ ಕೊನೆಗೆ ಅನ್ಸಾರರು ತಮ್ಮ ಹಿಂಜರಿಕೆಯ ಕಾರಣವನ್ನು ಪ್ರಸ್ತಾಪಿಸಿದ ನಂತರ ಹೀಗೆ ಸಲಹೆ ನೀಡಿದರು: ನಾವು ಎಲ್ಲ ಅವಸ್ಥೆಗಳಲ್ಲೂ ನಿಮ್ಮ ಜೊತೆಗೆ ಇರುವೆವು.

ಅನ್ಸಾರರ ಸಲಹೆಯ ನಂತರ ಹಝ್ರತ್ ಪೈಗಂಬರ್(ಸ) ಅಲ್ಲಿಂದ ಹೊರಟರು ಮತ್ತು ಬದ್ರ್ ಮೈದಾನದ ಸಮೀಪಕ್ಕೆ ತಲುಪಿದರು. ಸ್ವಲ್ಪ ಸಮಯದ ನಂತರ ಹಝ್ರತ್

ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ರ) ಅಲ್ಲಿಂದ ಹೊರಟರು ಮತ್ತು ಅರೇಬಿಯನಾದ ಒಬ್ಬ ಮುದುಕನ ಬಳಿಗೆ ಹೋಗಿ ನಿಂತರು ಹಾಗೂ ಅವರೊಡನೆ ಖುರೈಶಿಯರ ಬಗ್ಗೆ ವಿಚಾರಿಸಿದರು. ಮುದುಕನು ಹೇಳಿದನು: ಮುಹಮ್ಮದ್(ಸ) ಮತ್ತು ಅವರ ಸಂಗಡಿಗರು ಇಂತಿಂತಹ ದಿನದಲ್ಲಿ ಹೊರಟಿರುವವರು ಎಂದು ನನಗೆ ವಿವರ ಲಭಿಸಿದೆ. ಅದು ಸರಿಯೆಂದಾದರೆ, ಅವರು ಇಂದು ಇಂತಹ ಸ್ಥಳದಲ್ಲಿ ಇರುವರು. ಖುರೈಶಿಗಳು ಇಂತಿಂತಹ ದಿನದಲ್ಲಿ ಹೊರಟಿರುವವರು ಎಂದೂ ನನಗೆ ಗೊತ್ತಾಗಿದೆ. ಅದು ಸರಿಯೆಂದಾದರೆ, ಅವರು ಈಗ ಇಂತಿಂತಹ ಸ್ಥಳದಲ್ಲಿ ಇರುವರು. ನೀವು ಯಾರೆಂದು ಮುದುಕನು ಕೇಳಿದಾಗ, 'ನಾವು ನೀರಿನಿಂದ' ಎಂದು ಹಝ್ರತ್ ಪೈಗಂಬರ್(ಸ) ಬಹಳ ವಿವೇಕಯುತವಾಗಿ ಉತ್ತರಿಸಿದರು. ಬದ್ರಿನ ಕಾರಂಜಿಯ ಕುರಿತಾಗಿ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿರುವ ಸಾಧ್ಯತೆಯಿದೆ. ಅಲ್ಲಾಹನೇ ಬಲ್ಲನು.

ಮರಳಿ ಬಂದ ನಂತರ ಸಂಜೆ ಸಮಯದಲ್ಲಿ ಶತ್ರುಗಳ ಕುರಿತು ಇನ್ನಷ್ಟು ಮಾಹಿತಿ ಪಡೆಯಲಿಕ್ಕಾಗಿ ಹಝ್ರತ್ ಅಲಿ(ರ), ಹಝ್ರತ್ ಝುಬೇರ್(ರ) ಮತ್ತು ಹಝ್ರತ್ ಸಅದ್ ಬಿನ್ ವಖಾಸ್(ರ)ರನ್ನು ಹಝ್ರತ್ ಪೈಗಂಬರ್(ಸ) ಕೆಲವು ಸಹಾಬಿಯರ ಜೊತೆಗೆ ಬದ್ರಿನ ಚಿಲುಮೆಯ ಕಡೆಗೆ ಕಳುಹಿಸಿದರು. ಅವರು ಇಬ್ಬರು ವ್ಯಕ್ತಿಗಳನ್ನು ಹಿಡಿದುಕೊಂಡು ಬಂದರು. ಅವರು ಹೇಳಿದರು: ಖುರೈಶಿಗಳು ನಮ್ಮನ್ನು ನೀರನ್ನು ತರಲು ಕಳುಹಿಸಿರುವವರು. ಹಝ್ರತ್ ಪೈಗಂಬರ್(ಸ) ವಿಚಾರಿಸಿದಾಗ ಅವರು ಹೇಳಿದರು: ಬಹಳಷ್ಟು ಖುರೈಶಿಗಳು ಈ ಪರ್ವತದ ಹಿಂದೆ ಇರುವರು ಮತ್ತು ಅವರು ಪ್ರತಿದಿನ 9 – 10 ಒಂಟೆಗಳನ್ನು ಕೊಯ್ಯುತ್ತಾರೆ ಎಂದು ಹೇಳಿದರು. ಆಗ ಖುರೈಶಿಯರು ಒಂಬೈನೂರು ಅಥವಾ ಒಂದು ಸಾವಿರ ಸಂಖ್ಯೆಯಲ್ಲಿ ಇರಬಹುದು ಎಂದು ಹಝ್ರತ್ ಪೈಗಂಬರ್(ಸ) ಅಂದಾಜು ಮಾಡಿದರು. ಅನಂತರ ಅವರು ಸೈನ್ಯದಲ್ಲಿ ಇರುವ ಖುರೈಶಿನ ಅನೇಕ ಸರದಾರರ ಹೆಸರನ್ನು ಹೇಳಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಮಕ್ಕಾದವರು ತಮ್ಮ ಕರುಳಿನ ತುಣುಕುಗಳನ್ನು ಹೊರತೆಗೆದು ನಿಮ್ಮ ಮುಂದೆ ಇರಿಸಿರುವರು.

ಇದು ಹಝ್ರತ್ ಪೈಗಂಬರ್(ಸ)ರ ನಾಲಗೆಯಿಂದ ಅಚಾನಕ್ಕಾಗಿ ಹೊರಟ ಅತ್ಯಂತ ಬುದ್ಧಿವಂತಿಕೆಯ ಮತ್ತು ವಿವೇಕಯುತ ಮಾತಾಗಿದೆ. ಇದರಿಂದ ಅಲ್ಲಾಹನು ಖಂಡಿತ ವಿಜಯ ನೀಡುವನು ಎಂಬ ನಂಬಿಕೆಯಿಂದ ಮುಸ್ಲಿಮರ ಹೃದಯಗಳು ಗಟ್ಟಿಗೊಂಡುವು.

ಈ ಸಂದರ್ಭದಲ್ಲಿ ಹಝ್ರತ್ ಹಬ್ಬಾಬ್ ಬಿನ್ ಮುಂಧಿರ್(ರ) ಕೇಳಿದರು: ಯಾ ರಸೂಲಲ್ಲಾಹ್, ನೀವು ಈ ಜಾಗದಲ್ಲಿ ಅಲ್ಲಾಹನ ಆದೇಶದ ಪ್ರಕಾರ ತಂಗಿರುವಿರೋ ಅಥವಾ ಇದು ಕೇವಲ ನಿಮ್ಮ ಅಭಿಪ್ರಾಯ ಅಥವಾ ಯುದ್ಧತಂತ್ರವೇ?

ಹಝ್ರತ್ ಪೈಗಂಬರ್(ಸ) ಹೇಳಿದರು: ಇದು ಯುದ್ಧತಂತ್ರವಾಗಿದೆ. ಅವರು ಹೇಳಿದರು: ಹಾಗಾದರೆ ಈ ಜಾಗ ಅನುಯೋಜ್ಯವಲ್ಲ. ಶತ್ರುಗಳ ನೀರು ಇರುವ ಸಮೀಪದಲ್ಲಿ ತಂಗಬೇಕು ಮತ್ತು ಎಲ್ಲ ಬಾವಿಗಳನ್ನು ಮುಚ್ಚಬೇಕು. ನಮಗಾಗಿ ಒಂದು ಕೊಳದಲ್ಲಿ ನೀರು ತುಂಬಬೇಕು. ಯುದ್ಧ ನಡೆಯುವಾಗ ನಮಗೆ ನೀರು ಲಭಿಸುವುದು ಮತ್ತು ಶತ್ರುಗಳಿಗೆ ನೀರು ಲಭಿಸದು. ಈ ಸಲಹೆಯನ್ನು ಹಝ್ರತ್ ಪೈಗಂಬರ್(ಸ) ಇಷ್ಟಪಟ್ಟರು ಮತ್ತು ಶತ್ರುಗಳ ಅತ್ಯಂತ ಸಮೀಪವಿರುವ ಬಾವಿಗಳ ಬಳಿ ಡೇರೆ ಹಾಕಿದರು. ಇತರ ಬಾವಿಗಳನ್ನು ಮುಚ್ಚಲಾಯಿತು ಮತ್ತು ಒಂದು ಕೊಳವನ್ನು ತಯಾರಿಸಿ ಅದರಲ್ಲಿ ನೀರನ್ನು ತುಂಬಲಾಯಿತು. ಔಸ್ ಗೋತ್ರದ ಸರದಾರ ಸಅದ್ ಬಿನ್ ಮುಆಧ್(ರ)ರ ಸಲಹೆ ಪ್ರಕಾರ ಮೈದಾನದ ಒಂದು ಭಾಗದಲ್ಲಿ ಹಝ್ರತ್ ಪೈಗಂಬರ್(ಸ)ರಿಗಾಗಿ ಒಂದು ಚಪ್ಪರವನ್ನು ತಯಾರು ಮಾಡಲಾಯಿತು. ಅವರಿಗಾಗಿ ಸವಾರಿ ಮೃಗವನ್ನು ಕೂಡ ಅಲ್ಲಿ ಕಟ್ಟಲಾಯಿತು. ಅವರು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನೀವಿಲ್ಲಿ ತಂಗಿರಿ ಮತ್ತು ನಾವು ಯುದ್ಧ ಮಾಡುವೆವು. ನಾವು ಪರಾಜಿತರಾದರೆ, ನೀವು ಈ ಸವಾರಿಯಲ್ಲಿ ಮದೀನಕ್ಕೆ ಹೋಗಿರಿ. ಅಲ್ಲಿ ನಮ್ಮ ಸಹೋದರರು ನಿಮ್ಮ ಸಂರಕ್ಷಣೆ ಮಾಡುವರು.

ಈ ಸಂಬಂಧವಾಗಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಬದ್ರಿನ ಮೈದಾನಕ್ಕೆ ತಲುಪಿದಾಗ ಸಹಾಬಿಯರು ಸಮಾಲೋಚನೆ ನಡೆಸಿ ಒಂದು ಎತ್ತರದ ಜಾಗದಲ್ಲಿ ಒಂದು ಚಪ್ಪರವನ್ನು ಮಾಡಿಕೊಂಡು ಹಝ್ರತ್ ಪೈಗಂಬರ್(ಸ)ರನ್ನು ಅಲ್ಲಿ ಕುಳ್ಳಿರಿಸಿದರು. ಅತ್ಯಂತ ವೇಗದ ಒಂದು ಒಂಟೆಯನ್ನು ಅಲ್ಲಿ ಕಟ್ಟಿದರು ಹಾಗೂ ಹೀಗೆ ಹೇಳಿದರು: ನಾವು ಕೆಲವೇ ಜನರಿದ್ದೇವೆ ಮತ್ತು ಶತ್ರುಗಳು ಬಹಳಷ್ಟು ಇರುವರು. ನಮಗೆ ನಮ್ಮ ಮರಣದ ಬಗ್ಗೆ ಯಾವುದೇ ದುಃಖವಿಲ್ಲ. ನಮಗೆ ನಿಮ್ಮ ಬಗ್ಗೆ ಚಿಂತೆ ಇದೆ. ನಾವು ಮೃತಪಟ್ಟರೆ ಇಸ್ಲಾಮಿಗೆ ಯಾವುದೇ ನಷ್ಟ ಉಂಟಾಗದು. ಆದರೆ ಇಸ್ಲಾಮಿನ ಜೀವನ ನಿಮ್ಮೊಂದಿಗೆ ಹೊಂದಿಕೊಂಡಿದೆ. ಆದ್ದರಿಂದ ನಿಮ್ಮ ಸಂರಕ್ಷಣೆಯ ಏರ್ಪಾಡು ಮಾಡುವುದು ಅಗತ್ಯ. ಒಂದು ವೇಳೆ ನಾವು ಒಬ್ಬೊಬ್ಬರಾಗಿ ವಧಿಸಲ್ಪಟ್ಟರೆ, ಈ ಒಂಟೆಯಲ್ಲಿ ಸವಾರರಾಗಿ ನೀವು ಮದೀನಕ್ಕೆ ತಲುಪಿರಿ. ಅಲ್ಲಿ ನಮ್ಮ ಸಹೋದರರು ನಿಮ್ಮ ಸಂರಕ್ಷಣೆಯನ್ನು ಮಾಡುವರು ಎಂದು ಹೇಳಿದರು. ಹಝ್ರತ್ ಪೈಗಂಬರ್(ಸ) ಅವರ ಮಾತನ್ನು ಒಪ್ಪಲಿಲ್ಲ. ಅದನ್ನು ಸಮ್ಮತಿಸಲು ಸಾಧ್ಯವೂ ಇರಲಿಲ್ಲ. ಆದರೆ ಇದು ಸಹಾಬರ ಆವೇಶವಾಗಿತ್ತು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಅಲಿ(ರ) ಹೀಗೆ ಹೇಳಿದರು: ಸಹಾಬಿಯರಲ್ಲಿ ಅತ್ಯಂತ ಶೂರ ಮತ್ತು ಧೈರ್ಯಶಾಲಿ ಹಝ್ರತ್ ಅಬೂಬಕರ್(ರ) ಆಗಿದ್ದರು. ಬದ್ರ್ ಯುದ್ಧದ ವೇಳೆ ಹಝ್ರತ್ ಪೈಗಂಬರ್(ಸ)ರಿಗಾಗಿ ಒಂದು ಚಪ್ಪರವನ್ನು ಮಾಡಲಾದಾಗ ಕೂಡಲೇ ಹಝ್ರತ್ ಅಬೂಬಕರ್(ರ) ತೆರೆದ ಖಡ್ಗವನ್ನು ಎತ್ತಿಕೊಂಡು ಅಲ್ಲಿ ನಿಂತರು ಮತ್ತು ಈ ಅಪಾಯಕಾರಿ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ)ರ ಸಂರಕ್ಷಣೆಯ ಕರ್ತವ್ಯವನ್ನು ಈಡೇರಿಸಿದರು.

ಬೆಳಿಗ್ಗೆ ಖುರೈಶಿಗಳು ಮುಂದೆ ಬಂದಾಗ ಹಝ್ರತ್ ಪೈಗಂಬರ್(ಸ) ಅಲ್ಲಾಹನಲ್ಲಿ ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ನೀನು ಮಾಡಿದ ಸಹಾಯದ ವಾಗ್ದಾನವನ್ನು ಈಡೇರಿಸು ಮತ್ತು ಅವರನ್ನು ಇಂದೇ ಮುಗಿಸುಬಿಡು.

ಖುರೈಶಿಗಳು ಬದ್ರಿನ ಮೈದಾನಕ್ಕೆ ತಲುಪಿದಾಗ, ಅವರಲ್ಲಿ ಒಂದು ಸಂಘ ಹಝ್ರತ್ ಪೈಗಂಬರ್(ಸ)ರ ಕೊಳಕ್ಕೆ ಬಂದು ನೀರು ಕುಡಿಯಲು ತೊಡಗಿದರು. ಆ ದಿನದಂದು ಹಕೀಂ ಬಿನ್ ಹಝ್ಝಾಂ ಹೊರತುಪಡಿಸಿ ಆ ಕೊಳದಿಂದ ನೀರು ಕುಡಿದ ಎಲ್ಲರೂ ಯುದ್ಧದಲ್ಲಿ ಕೊಲ್ಲಲ್ಪಟ್ಟರು. ಹಕೀಂ ಅನಂತರ ಮುಸ್ಲಿಮರಾದರು.

ಖುರೈಶಿಯರು ಬರುವುದಕ್ಕೆ ಮುಂಚಿತವಾಗಿ ಹಝ್ರತ್ ಪೈಗಂಬರ್(ಸ) ಸಹಾಬಿಯರ ಪಂಕ್ತಿಯನ್ನು ಸರಿಪಡಿಸಿದರು. ಹಝ್ರತ್ ಪೈಗಂಬರ್(ಸ) ತನ್ನ ಬಾಣದಿಂದ ಸೂಚನೆ ನೀಡುತ್ತಿದ್ದರು. ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ)ರಿಗೆ ಹಝ್ರತ್ ಪೈಗಂಬರ್(ಸ) ಧ್ವಜವನ್ನು ನೀಡಿದರು. ಪಂಕ್ತಿಗಳನ್ನು ಸರಿಪಡಿಸುತ್ತಿದ್ದಾಗ ಹಝ್ರತ್ ಪೈಗಂಬರ್(ಸ) ಸುವಾದ್ ಬಿನ್ ಗ಼ಝಿಯರ ಬಳಿಯಿಂದ ದಾಟಿ ಹೋಗುತ್ತಿದ್ದರು. ಅವರು ಪಂಕ್ತಿಯಿಂದ ಸ್ವಲ್ಪ ಹೊರಗೆ ಆಗಿದ್ದರು. ಅವರ ಬೆನ್ನಿಗೆ ಬಾಣವನ್ನು ತಗುಲಿಸಿಕೊಂಡು ನೇರವಾಗಿ ನಿಲ್ಲು ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಹಝ್ರತ್ ಸುವಾದ್(ರ) ಹೇಳಿದರು: ನೀವು ನನಗೆ ತೊಂದರೆ ಕೊಟ್ಟಿದ್ದೀರಿ. ನೀವು ಇದಕ್ಕೆ ಪ್ರಾಯಶ್ಚಿತ್ತ ನೀಡಿರಿ. ಹಝ್ರತ್ ಪೈಗಂಬರ್(ಸ) ತನ್ನ ದೇಹದಿಂದ ಅಂಗಿಯನ್ನು ಕಳಚಿ ಪ್ರತೀಕಾರವನ್ನು ಪಡೆಯಿರಿ ಎಂದು ಅವರೊಡನೆ ಹೇಳಿದರು. ಹಝ್ರತ್ ಸುವಾದ್(ರ) ಹಝ್ರತ್ ಪೈಗಂಬರ್(ಸ)ರನ್ನು ಆಲಂಗಿಸಿದರು ಮತ್ತು ಅವರ ದೇಹವನ್ನು ಚುಂಬಿಸಲು ತೊಡಗಿದರು. ನಿಮ್ಮ ದೇಹದೊಂದಿಗೆ ನನ್ನ ದೇಹ ಸ್ಪರ್ಶಿಸುವ ರೀತಿಯಲ್ಲಿ ನನ್ನ ಕೊನೆಯ ಗಳಿಗೆ ದಾಟಿಹೋಗಲಿ ಎಂದು ನಾನು ಬಯಸಿದೆ ಅಷ್ಟೆ, ಎಂದು ಹೇಳಿದರು. ಹಝ್ರತ್ ಪೈಗಂಬರ್(ಸ) ಅವರಿಗೆ ಒಳಿತಿನ ದುಆವನ್ನು ಮಾಡಿದರು. ಇದಾಗಿದೆ ಪ್ರೀತಿ ಪ್ರೇಮದ ದೃಶ್ಯಗಳು.

ಈ ವಿಷಯ ಮುಂದುವರೆಯುವುದು – ಇನ್‌ಶಾ ಅಲ್ಲಾಹ್.

(ಕೊನೆಗೆ ಹುಝೂರ್ ಇಬ್ಬರು ದಿವಂಗತರ ಬಗ್ಗೆ ಪ್ರಸ್ತಾಪಿಸಿದ ನಂತರ ಅವರ ಜನಾಝ಼ ಗ಼ಾಇಬ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ، وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, **'Masjid Mubarak'**, Islamabad, Tilford, UK. On 23-06-2023*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon